ಮಲ್ಲಪನ ಮನೆಯಲ್ಲಿ ಮದುವೆಯಾಗಿ ಒಂದು ತಿಂಗಳುರುಳಿತು. ನಾಗದೇವನನ್ನು ಬಲವಂತಮಾಡಿ ಪುಂಗನೂರಿನಲ್ಲೇ ಉಳಿಸಿಕೊಂಡರು. ಅವನ ರಾಗ ರಸದಲ್ಲಿ ರಂಗೋಳಿಸುತ್ತಾ ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ರಾಸಲೀಲೆಯಲ್ಲಿ ತನ್ಮಯರಾದರು. ಗಂಡನೊಡನೆ ವೈಹಾಳಿಯಲ್ಲಿ ಪೈಪೋಟಿಯೆಸಗುವರು. ಒಮ್ಮೊಮ್ಮೆ ಕತ್ತಿ ವರಸೆಯಲ್ಲಿ ಅವನನ್ನು ಸೋಲಿಸಿ ಬೆರಗುಗೊಳಿಸುವರು. ಆಗಾಗ ಜಲಕ್ರೀಡೆಯಾಡಿ ಪ್ರಣಯರಸ ಬತ್ತದಂತೆ ನೋಡಿಕೊಂಡರು. ಬಿಲ್ಲನ್ನು ಠೇಂಕಾರಗೊಳಿಸಿ ಸಾಹಸಿಯಾದ ನಾಗದೇವನ ಪರಾಕ್ರಮವನ್ನು ಪ್ರಚೋದಿಸುತ್ತಿದ್ದರು. ಇವರಿಬ್ಬರೂ ವೀಣಾ ಪ್ರಾಣೆಗಳಾಗಿ ನಿಂತಾಗ ನಾಗದೇವ ಅವರ ವೀಣಾನಾದಕ್ಕೆ ತಲೆದೂಗಿ ಮರುಲಾಗುತ್ತಿದ್ದನು. ತಂಗಾಳಿ ಮಲ್ಲಿಗೆಯ ಬನದಲ್ಲಿ ಬೀಸಿ ಬರುವಂತೆ ಇವರ ಆಲಾಪನೆ ಮೋಹಕವಾಗಿರುವುದು. ಕುಸುಮರಾಸಿಯನ್ನು ಕೆದರಿದಂತೆ ನಾದವನ್ನು ಎತ್ತೆತ್ತಲೂ ಚೆಲ್ಲಿ ನಾಗದೇವನನ್ನು ಮರುಳುಗೊಳಿಸುವರು. ಕೆಲವೊಮ್ಮೆ ನರ್ತಕಿಯರಾಗಿ ಕಾಣಿಸಿಕೊಂಡು ಇವರಿಬ್ಬರೂ ಪಾರಿವಾಳದಂತೆ ಆಡುವರು. ತಂಗಾಳಿಯಂತೆ ತೇಲಿ ಬರುವರು. ಹರಿವ ನದಿಯಂತೆ ಹರಿದು ನಾಗದೇವನಲ್ಲಿ ರಾಗರಸದ ತೆರೆಯೇಳಿಸುವರು ! ಅವನನ್ನು ಅರೆಚಣವೂ ಒಂಟಿಯಾಗಿರಲು ಬಿಡದೆ ಈ ಮಾಟಗಾತಿಯರು ಸಮ್ಮೋಹನದಲ್ಲಿ ಮುಳುಗಿಸಿ ಬಿಟ್ಟರು !

ಚಾಳುಕ್ಯ ರಾಜಕೀಯದಲ್ಲಿ ರಾಷ್ಟ್ರಕೂಟರ ಗೊಜ್ಜರ ಕೋಲಾಹಲವೆಬ್ಬಿಸಿದನು. ಹಿಂದೊಮ್ಮೆ ಅರಿಕೇಸರಿ ಈತನನ್ನು ಸದೆಬಡಿದು ರಾಜ್ಯಭ್ರಷ್ಟನಾಗುವಂತೆ ಮಾಡಿದ್ದನು. ರಾಷ್ಟ್ರಕೂಟರ ರಾಜ್ಯವನ್ನು ಗೊಜ್ಜರನ ಚಿಕ್ಕಪ್ಪನಾದ ಬದ್ದೆಗನಿಗೆ ಕೊಟ್ಟು ಅರಿಕೇಸರಿ ಪಟ್ಟಕಟ್ಟಿದನು. ಗೊಜ್ಜರ ಮಹಾನೀಚ. ಬಂಧುಮಿತ್ರರಿಗೆಲ್ಲ ಪಂಗಲನಾಮ ಹಾಕಿ ತನ್ನ ಅಣ್ಣನನ್ನೇ ಸಿಂಹಾಸನದಿಂದ ನೂಕಿ ತಾನು ಗದ್ದುಗೆಯೇರಿ ಮೆರೆದ ಮಾಯಾವಿ ! ಇಂಥವನನ್ನು ಅರಿಕೇಸರಿ ನಿಗ್ರಹಿಸಿ ಕರ್ಣಾಟಕದಲ್ಲಿ ಶಾಂತಿ ಸಮಾಧಾನವನ್ನು ತಂದಿದ್ದನು. ಅರಿಕೇಸರಿಯ ನಂತರ ಗೊಜ್ಜರ ಮತ್ತೊಮ್ಮೆ ಸೈನ್ಯ ಕಟ್ಟಿದನು. ಅಕ್ಕಪಕ್ಕದ ಪಾಳೆಯ ಪಟ್ಟುಗಳನ್ನು ದೋಚಿದನು. ಚಾಳುಕ್ಯರ ತೈಲಪನ ಭೂಭಾಗಕ್ಕೆ ನುಗ್ಗಿ ಆಗಾಗ ದರೋಡೆ ಮಾಡಿ ಗೊಜ್ಜರ ಅವಾಂತರವೆಬ್ಬಿಸಿದನು. ತೈಲಪ ರೋಸಿನಲ್ಲಿ ಗೊಜ್ಜರನಿಗೂ

ಪುನ್ನಮಯ್ಯನಿಗೂ ಹಣಾಹಣಿಯಾಯಿತು. ಸಹಸ್ರಾರು ತಲೆಗಳುರುಳಿದವು. ಕಾವೇರಿಯ ನೀರೆಲ್ಲ ರಕ್ತರಂಜಿತವಾಗಿ ಹೋಯಿತು. ತೈಲಪನ ಸೇನೆಗೆ ಜಯವಾದರೂ ಪುನ್ನಮಯ್ಯ ಹೋರಾಟದಲ್ಲಿ ಗೊಜ್ಜರನ ಬಾಣಕ್ಕೆ ಸಿಕ್ಕಿ ಆನೆಯಿಂದ ಕೆಳಗುರುಳಿದನು. ತೈಲಪನಿಗೆ ಜಯವಾಗಲಿ ಎಂದು ಒದರುತ್ತ ಪ್ರಾಣನೀಗಿದನು. ಅವನ ಹೆಣವನ್ನು ಚಾಲುಕ್ಯ ಸೇನೆ ಜೋಪಾನವಾಗಿ ಪುಂಗನೂರಿಗೆ ತಂದುಮುಟ್ಟಿಸಿತು.

ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯ ಮದುವೆಯ ಚಪ್ಪರ ಇನ್ನೂ ಹಾಗೆ ಇತ್ತು. ಮದುವಣಿಗೆ ಇನ್ನೂ ಅಲ್ಲೇ ಇದ್ದನು. ನವದಂಪತಿಗಳು ಇನ್ನೂ ಮದುವೆಯ ಗುಂಗಿನಲ್ಲೇ ಇದ್ದರು. ಇಂಥ ಸಂದರ್ಭದಲ್ಲಿ ಪುನ್ನಮಯ್ಯ ಹೆಣವಾಗಿ ಹಿಂದಿರುಗಿದನು. ಮದುವೆಯ ಮಂಟಪದಲ್ಲೇ ಹೆಣವನ್ನೂ ಇಳಿಸಿಕೊಂಡು ಮಲ್ಲಪ ಗೋಳಾಡಬೇಕಾಯಿತು. ತಂದೆಯೂ ಹೋದನು ಇತ್ತ ತಮ್ಮನನ್ನೂ ಕಳೆದುಕೊಂಡು ಮಲ್ಲಪ ಒಂಟಿಯಾದನು. ಅವನ ಮಕ್ಕಳೆಲ್ಲ ಮಕ್ಕಳಿಲ್ಲದ ಚಿಕ್ಕಪ್ಪನನ್ನು ತಂದೆಯೆಂದೇ ಗೌರವಿಸಿದ್ದರು. ಅವರ ಸಂಕಟ ಹೇಳತೀರದು. ಅಬಕಬ್ಬೆ ಪುನ್ನಮಯ್ಯನನ್ನು ಎಂದೂ ಮೈದುನನೆಂದು ತಿಳಿದಿರಲಿಲ್ಲ. ತನ್ನ ತಮ್ಮನೆಂದುಕೊಂಡೇ ಅಕ್ಕರೆಯಿಂದ ನೋಡಿಕೊಂಡಿದ್ದಳು. ಅವಳ ಕರುಳಿಗೂ ಬರೆ ಬಿದ್ದಂತಾಯಿತು. ಕೌಸಲ್ಯಬ್ಬೆ ಹಸುಗೂಸಾಗಿ ಅತ್ತಳು. ಎದೆ ಚಚ್ಚಿಕೊಂಡು ಚಪ್ಪರ ಹಾರಿಹೋಗುವಂತೆ ಅರಚಿದಳು. ಮದುವಣ ಗಿತ್ತಿಯರಾದ ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ಮಲ್ಲಿಗೆಯ ರಾಶಿಯಿಂದ ಮೇಲೆದ್ದು ಬಂದು ಚಿಕ್ಕಪ್ಪನ ವಿಕೃತವಾದ ಹೆಣವನ್ನು ಕಣ್ಣಾರೆ ಕಂಡು ತತ್ತರಿಸಿ ಹೋದರು. ಬಡವರಾದರೂ ಸಹಜವಾದ ಸಾವನ್ನು ಕಾಣುವರಲ್ಲ! ನಮ್ಮ ಚಿಕ್ಕಪ್ಪನಿಗೆ ಈ ಗತಿಯೇ ಎಂದು ಆ ಕನ್ನೆಯರಿಬ್ಬರೂ ಕಲ್ಲು ಕರಗುವಂತೆ ಆಕ್ರಂದನವೆಸಗಿದರು. ಒಬ್ಬರ ಅಳು ಇನ್ನೊಬ್ಬರ ಅಳುವಿಗೆ ಅಡಿಗಲ್ಲಾಗಿ ಏರುತ್ತಾ ಹೋಯಿತು. ನಾಗದೇವನೂ ಎಲ್ಲರ ಸಂಕಟವನ್ನು ಕಂಡು ಕಂಬನಿಮಿಡಿದನು.

ಪುನ್ನಮಯ್ಯನ ಹೆಣವನ್ನು ಚಿತೆಗೇರಿಸಲು ಏರ್ಪಾಟುಗಳಾದವು. ಕೌಸಲ್ಯಬ್ಬೆ ತಾನೂ ಸಹಗಮನ ಮಾಡುವುದಾಗಿ ಹಟಹಿಡಿದಳು.

“ಕೌಸಲ್ಯ, ನಮ್ಮನ್ನು ಬಿಟ್ಟು ಹೋಗುವೆಯೇನಮ್ಮ” ಎಂದು ಅಬ್ಬಕಬ್ಬೆ ತಬ್ಬಿಕೊಂಡು ಅತ್ತಳು.

"ಅಕ್ಕ, ನಮ್ಮಿಂದ ಏನಾದರೂ ತಪ್ಪಾಗಿದ್ದರೆ ಕ್ಷಮಿಸಿ ಬಿಡು ಅಕ್ಕ" ಎಂದು ಕೌಸಲ್ಯಬ್ಬೆ ಅಂಗಲಾಚಿದಾಗ,

"ಅಯ್ಯೋ ತಾಯಿ ನೀನು ನನಗೆ ವಾರಗಿತ್ತಿಯಲ್ಲಮ್ಮ. ಬೆನ್ನಿಗೆ ಬಿದ್ದ ತಂಗಿಯಾಗಿದ್ದಲ್ಲೇ! ನನ್ನಿಂದ ಏನಾದರೂ ಅಪಚಾರವಾಗಿರಬಹುದು. ಮನಸ್ಸಿನಲ್ಲಿ ಇಟ್ಟುಕೋಬೇಡ ತಾಯಿ" ಎಂದು ಅಬ್ಬಕಬ್ಬೆ ಗೋಗರೆದಳು.

"ಅತ್ತಿ. ನನ್ನನ್ನು ಬೀಳ್ಕೊಡಮ್ಮ" ಎನ್ನುವಾಗ ಕೌಸಲ್ಯಬ್ಬೆ ಮುಂದಕ್ಕೆ ಮಾತನಾಡಲಾರದೆ ಗದ್ಗದಿಸಿದಳು.

"ಅಮ್ಮ, ನಮ್ಮನ್ನು ತಬ್ಬಲಿ ಮಾಡುವೆಯಾ. ನಮ್ಮನ್ನು ಗಂಡನ ಮನೆಗೆ ಕಳುಹಿಸಿ ಕೊಡುವವರೆಗಾದರೂ ಇದ್ದುಬಿಡು ಚಿಕ್ಕಮ್ಮ" ಎನ್ನುತ್ತ ಅತ್ತಿಮಬ್ಬೆ ಗೋಳಾಡುತ್ತ ಅಂಗಲಾಚಿದಳು.

"ಗುಂಡು, ನಿನ್ನನ್ನು ಹೇಗೆ ಬಿಟ್ಟು ಹೋಗಲಿ ತಾಯಿ?" ಎನ್ನುತ್ತ ಕೌಸಲ್ಯಬ್ಬೆ ಹಿಂಜರಿದಳು.

"ಚಿಕ್ಕಮ್ಮ, ಅಜ್ಜ ಸತ್ತನಂತರ ನೀನೇ ನನಗೆ ಸರ್ವಸ್ವವಾಗಿದ್ದೆ. ತಬ್ಬಲಿ ಮಾಡಿ ಹೋಗುತ್ತೀಯ ಚಿಕ್ಕಮ್ಮ" ಎಂದು ಗುಂಡುಮಬ್ಬೆ ನೆಲಕ್ಕೆ ಕುಸಿದಳು. ಮಲ್ಲಪನ ಮಕ್ಕಳೆಲ್ಲ ಬಂದು ಚಿಕ್ಕಮ್ಮನನ್ನು ಬೀಳ್ಕೊಡಲಾರದೆ ಗೋಳಿಟ್ಟರು.

ಚಿತೆಯ ಮೇಲೆ ಪುನ್ನಮಯ್ಯನ ಹೆಣವನ್ನು ಇಟ್ಟು ಮಲ್ಲಪ ಬೆಂಕಿ ತಾಕಿಸಿದನು. ಒಣಗಿದ ಸೌದೆ ದಗ ದಗ ಉರಿಯಿತು. ಕೌಸಲ್ಯಬ್ಬೆ ಸರ್ವಾಲಂಕೃತ ಭೂಷಿತೆಯಾಗಿ ಚಿತೆಯನ್ನು ಬಲವಂದು ನಗುನಗುತ್ತ ಚಿತೆಯ ಮೇಲೇರಿ ಗಂಡನ ಬಳಿ ಹಾಯಾಗಿ ಮಲಗಿದಳು. ಜ್ವಾಲೆ ಕ್ಷಣಕ್ಷಣಕ್ಕೂ ಹೆಚ್ಚಿ ಹೆಣವನ್ನೂ ಹೆಣ್ಣನ್ನೂ ದಹಿಸಿಹಾಕಿತು.

ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ಹೆಣ್ಣಿನ ಬಾಳು ಕಣ್ಣೀರೆಂದು ನಿರ್ಧರಿಸಿ ಬಿಟ್ಟರು. ಅರಿಸಿನದ ಮೈಮಾಸುವ ಮುನ್ನ ಈ ಕನ್ಯಾಮಣಿಯರು ಹೆಣ್ಣಿನ ಬಾಳ್ವೆಯ ಬವಣೆಯನ್ನು ಕಂಡು ಬೆಚ್ಚುವಂತಾಯಿತು. ಅಜ್ಜನ ಹೆಣವನ್ನು ಕಂಡಾಗಲೇ ಇವರು ಭೂಮಿಗಿಳಿದು ಹೋಗಿದ್ದರು. ಅದನ್ನು ಮರೆಯುತ್ತಿರುವಾಗಲೆ ಚಿಕ್ಕಪ್ಪನ ಸಾವು ! ಚಿಕ್ಕಮ್ಮನ ಸಹಗಮನ ! ಅತ್ತಾಜ್ಜ ಊಟವನ್ನು ತಗ್ಗಿಸಿ ಸಾವನ್ನು ಕೈಬೀಸಿ ಕರೆದನು. ಇವರೆಲ್ಲ ಇದ್ದೂ ಜವನ ಕೋಲಾಹಲವನ್ನು ತಪ್ಪಿಸಲಾರದೇ

ಹೋದರು. ಇತ್ತ ಚಿಕ್ಕಮ್ಮ ಜ್ವಾಲೆಯೊಳಗೆ ನುಗ್ಗಿ ಬೆಂದು ಹೋಗುವುದನ್ನು ಈ ವನಿತೆಯರು ಕಂಡು ಬಾಯ್ ಬಾಯ್ ಬಿಟ್ಟು ಒರಲಿದರು. ತಾವೂ ನುಗ್ಗಲು ಹೋಗಿ ಅವರಿವರು ಗದರಿಸಿ ನೂಕಿದಾಗ ಇವರಿಬ್ಬರೂ ನಿಸ್ಸಹಾಯರಾಗಿ ನೆಲಕ್ಕುರುಳಿದ್ದರು. ಧರ್ಮದ ಹೆಸರಿನಲ್ಲಿ ಅಜ್ಜ ಪ್ರಾಣಬಿಟ್ಟರೆ ಸಂಪ್ರದಾಯದ ಹೆಸರಿನಲ್ಲಿ ಚಿಕ್ಕಮ್ಮ ಉರಿದು ಹೋದಳು! ಇವನ್ನೆಲ್ಲ ಕಂಡು ಈ ಕನ್ನೆಯರು ಕತಕತ ಕುದಿದು ಕಣ್ಣೀರಿನ ಹೊಳೆಹರಿಸಿದರು. (ಸಹಗಮನವನ್ನು ಜೈನಧರ್ಮ ಒಪ್ಪುವುದಿಲ್ಲ. ಆದರೂ ಹತ್ತನೆಯ ಶತಮಾನದಲ್ಲಿ ಕೆಲವು ಮನೆತನಗಳಲ್ಲಿ ಮಾತ್ರ ಸಹಗಮನದ ಸಂಪ್ರದಾಯವಿತ್ತು.)

ಪರಮ ದ್ರೋಹರೊಳೊಂದಿ ತನ್ನೊಳಿರಿಯಲ್ಗೋವಿಂದರಂ ಬರ್ಪುದುಂ ।
ಸೆರಗಂ ಪಾರದೆ ತಾಗಿ ತೈಲಪನೃಪಂ ಬಾಳ್ಗೆಂದು ಬಾಳ್ದಿತ್ತುಮ ॥
ಚ್ಚರದಿಂ ಸಾರ್ಚಿದರಂ ಪಡಲ್ವಡಿಸಿ ಕಾವೇರೀ ಸರಿತ್ತೀರದೊಳ್ ।
ಸುರಲೋಕಾತಿಥಿಯಾದ ಪೊನ್ನನೆ ವಲಂ ಗಂಡಂ ಪೆರರ್ ಗಂಡರೇ ॥